# ಅಧ್ಯಾಯ - 8

# ಪವಿತ್ರ ಆತ್ಮನ ಶಕ್ತಿ

## ಪವಿತ್ರಾತ್ಮ ಯಾರು ?

ಪವಿತ್ರಾತ್ಮನು ದೇವರಲ್ಲಿ ಒಂದು ಭಾಗವಾಗಿದ್ದಾನೆ.

ದೇವರು ಮೂರು ವಿಧವಾಗಿ ನಮ್ಮಲ್ಲಿ ಕಾರ್ಯ ನಡೆಸುತ್ತಾನೆ.

೧. ದೇವರು ತಂದೆಯಾಗಿದ್ದಾನೆ.

೨. ದೇವರು ಕುಮಾರನಾಗಿ ನಮ್ಮ ನಡುವೆ ಬಂದು ಜೀವಿಸಿದನು.

೩. ಪವಿತ್ರಾತ್ಮನು ನಮ್ಮಲ್ಲಿ ಶಾಶ್ವತವಾಗಿ ಜೀವಿಸಲು ಬಂದನು.

ಇದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಒಂದು ಆಪಿಲ್ ಹಣ್ಣನ್ನು ಗಮನಿಸಬಹುದು. ಅದರ ಹೊರ ಚರ್ಮವು ಒಂದು ಭಾಗವಾಗಿವೆ ಅದರ ಒಳಗಡೆಯ ಭಾಗವು ಮತ್ತು ಹಣ್ಣಿನ ಆಳದಲ್ಲಿ ರುವ ಒಂದು ಬಾಗವು ಹೀಗೆ ದೇವರು ತ್ರಿತ್ವವಾಗಿ ತನ್ನ ಕಾರ್ಯಗಳನ್ನು ನಮ್ಮಲ್ಲಿ ವಡೆಸುವವನಾಗಿದ್ದಾನೆ.

ಪವಿತ್ರಾತ್ಮನು ಒಂದು ವಸ್ತು ಅಲ್ಲ ಆತನು ಒಂದು ವ್ಯಕ್ತಿಯು ಮತ್ತು ದೇವರ ಶಕ್ತಿಯೂ ಆಗಿದ್ದಾನೆ. ಪವಿತ್ರಾತ್ಮನು ಒಬ್ಬ ವ್ಯಕ್ತಿಯಗಿದ್ದಾನೆ. ಆದುದರಿಂದು ನಾವು ಆತನನ್ನು ಅದು ಇದು ಎಂದು ಉಚ್ಚರಿಸಬಾರದು. ''ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ. ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇಕೊಬ್ಬ ಸಹಾಯಕ ನನ್ನು ಸದಾಕಾಲ ನಿಮ್ಮ ಸಂಗಹ ಇರುವುದಕ್ಕೆ ಕೊಡುವನು. ಆ ಸಹಾಯಕನು ಯಾಕೆಂದರೆ ಸತ್ಯದ ಆತ್ಮನೇ ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವುದರಿಂದ ಆತನನ್ನು ಹೊಂದಿಲಾರದು. ನೀವುವ ಆತನನ್ನು ಬಲ್ಲಿರಿ; ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು'' (ಯೋಹಾನ ೧೪ : ೧೫-೧೭)

## ಪವಿತ್ರಾತ್ಮನು ನಮಗೆ ಯಾತೆ ಬೇಕು ?

ಪವಿತ್ರಾತ್ಮನು ನಮ್ಮ ಪಾಪದ ಸ್ಥತಿಯನ್ನು ತಿಳಿಸಿ ದೇವರೊಂದಿಗೆ ನಾವು ಸಹವಾಸ ಮಾಡಲು ಸಹಾಯ ಮಾಡುತ್ತಾನೆ (ಯೋಹಾನ ೧೬ : ೭-೧೧)

ಪವಿತ್ರಾತ್ಮನು ದೇವರ ಕುಟುಂಬದಲ್ಲಿ ನಾವು ಹುಟ್ಟಲು ದೇವರ ಆತ್ಮನು ನಮ್ಮಲ್ಲಿ ವಾಸಮಾಡಲು ಸಹಾಯ ಮಾಡುತ್ತಾನೆ ( ೨ ಕೊರಿಂಥ ೩ : ೬)

ಯೇಸುಕ್ರಿಸ್ತನು ಸತ್ತು ಮತ್ತೆ ಎದ್ದುಬಂದು ದೇವರ ಬಲಗಡೆ ಕೂರಲು ಪರಲೋಕಕ್ಕೆ ಹೋದನು. ಆತನ ಕ್ರಿಯೆಗಳು ನಮ್ಮಲ್ಲಿ ನಡೆಸಲು ಪವಿತ್ರಾತ್ಮನನ್ನು ಯೇಸು ತನ್ನನ್ನು ನಂಬಿದವರಿಗೆ ಕಳುಹಿಸಕೊಟ್ಟಿದ್ದಾನೆ ( ಲೋಕ ೨೧ : ೨೩) ಆದರೆ ಯೇಸು ತನ್ನ ಶಕ್ತಿಯನ್ನು ಪವಿತ್ರಾತ್ಮನ ಮೂಲಕ ನಮ್ಮಲ್ಲಿ ತುಂಬಿಸುವನು.

''ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ ಯೇಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವುದು. ಆದುದರಿಂದ ನೀವು ಯೆರುಸಲೇಯನ್ನು ಬಿಟ್ಟುಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಶಿದಂತ ವಾಗ್ದಾನಕ್ಕೆ ಕಾದುಕೊಂಡಿರ್ರಿ ಏಂದು ಅಪ್ಪಣೆಕೊಟ್ಟನು. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರುಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರ ಬೇಕು ಎಂದನು. (ಅ.ಕಾ. ೧ : ೪, ೫, ೮)

ಯೇಸುಕ್ರಿಸ್ತನು ತಾನು ಹೇಳಿದ ಪ್ರಾಕಾರವೇ ಪರಲೋಕಕ್ಕೆ ಏರಿಹೋಗಿ ತಂದೆಯ ಬಲಗಡೆ ಕುಳಿತುಕೊಡು ನಮಗೆ ನಮ್ಮಲ್ಲಿ ವಾಸಮಾಡಲು ಲೋಕದ ಬಗ್ಗೆ, ಪಾಪದ ಬಗ್ಗೆ ಮತ್ತು ನೀತಿಯ ವಿಷಯದಲ್ಲಿ ತಿಳಿಸಲು ಪವಿತ್ರಾತ್ಮನನ್ನು ನಂಬಿರುವರಿಗೆ ಕಳುಹಿಸಿಕೊಟ್ಟಿದ್ದಾನೆ. ( ಲೋಕ ೨೪ : ೪೬-೪೯) (ಯೋಹಾನು ೧೬ : ೭)

ಪವಿತ್ರಾತ್ಮನಿಂದ ತುಂಬಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದಾಗ ನಾವು ಸಂಪೂರ್ಣವಾಗಿ ದೇವರ ಆಜ್ಞೆಗೆ ಒಳಪಟ್ಟು ಜೀವಿಸಿದಾಗ ನೀನು ನಿಜಲುಗಿ ದೇವರ ಶಕ್ತಿಯನ್ನು ಆತನ ಅದ್ಭುತವಾದ ಕಾರ್ಯಗಳನ್ನು ಕಣ್ಣಾರೆಕಂಡು ದೇವರನ್ನು ಹೆಚ್ಚಾಗಿ ಸ್ತುತಿಸುತ್ತೀ. ಹೀಗೆ ದೇವರಲ್ಲಿ ನಂಬಿಕೆ ಇಟ್ಟು ದೇವರಿಗಾಗಿ ಜೀವಿಸುತ್ತಾ ದೇವರ ಪವಿತ್ರಾತ್ಮನಿಂದ ಬಹು ಶಕ್ತಿಯಿಂದ ನಡೆಸಲ್ಪಡುವೆ.

## ಪವಿತ್ರಾತ್ಮನ ಶಕ್ತಿಯನ್ನು ಈ ದಿನ ಹೊಂದಬಹುದೋ ?

ಸತ್ಯವೇದವು (ಬೈಬಿಲ್) ಹೇಳುವುದೇನೆಂದರೇ ಯೇಸುಕ್ರಿಸ್ತನು ತನ್ನನ್ನು ನಂಬಿದವರಿಗೆ ತಕ್ಷಣವೇ ಆತನ ನಾಮದಲ್ಲಿ ನಂಬಿಕೆ ಇಟ್ಟು ಯೇಸುವಿನ ರಕ್ತದಲ್ಲಿ ನಿನ್ನ ಪಾಪವನ್ನು ತೊಳೆದುಕೊಂಡು ವಾಕ್ಯವ ಪ್ರಕಾರ ದೀಕ್ಷಾಸ್ನಾನ ಹೊಂದಿದಾಗ ದೇವರು ನಿನ್ನನ್ನು ತನ್ನ ಮಗನನ್ನಾಗಿ ಸ್ವೀಕರಿಸಿ ನಿನ್ನನ್ನು ತನ್ನ ಪವಿತ್ರಾತ್ಮದ ಮೂಲಕ ಬಲವಾಗಿ ನಡೆಸುವನು. ಈ ಕಾರ್ಯವು ನೀನು ಯೇಸುವಿನ್ನಲ್ಲಿ ನಂಬಿಕೆ ಇಟ್ಟ ತಕ್ಷಣವೇ ದೇವರ ಆಜ್ಞೆಯ ಪ್ರಕಾರವಾಗಿ ನೀನು ಮಾಹಿದಾಗ ಈಗಲೇ ಈ ಕ್ಷಣದಿಂದಲೇ ದೇವರು ತನ್ನ ಕಾರ್ಯವನ್ನು ನಿನ್ನಲ್ಲಿ ನಡೆಸುವನು. ದೇವರಿಗೆ ನಿಧಾನವಿಲ್ಲ. ನೀನು ಮಾತ್ರ ನಿದಾನಮಾಡದೇ ತಕ್ಷಣವೇ ವಿಧೇಯನಾದರೆ ಅದು ದೇವರಿಗೆ ವಿಷ್ಟೊ ಸಂತೋಷದ ಸಂಗತಿಯಾಗಿದೆ. ''ನಿಮ್ಮ ಪಾಪಗಳು ಪರಿಹಾರ ವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರಿಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ. ಆ ವಾಗ್ದಾನವು ನಿಮಗೊ ನಿಮ್ಮ ಮಕ್ಕಳಿಗೂ ದೊರವಾಗಿರುವವರೆಲ್ಲರಿಗೂ ಅಂತು ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು. (ಅ. ಕೃ. ೨ : ೩೮, ೩೯)

## ಪವಿತ್ರಾತ್ಮನು ನನಗೆ ಏನು ಮಾಡುತ್ತಾನೆ

ನೀವು ಯಾವುದೇ ವಿಷಯದಲ್ಲಿ ಬಲವಂತವಾಗಿ ಮಾಡಲು ಪವಿತ್ರಾತ್ಮನು ಒಪ್ಪಿಕೊಳ್ಳುವುದಿಲ್ಲ. ದೇವರ ರಾಜ್ಯದಲ್ಲಿ ನೀನು ಹೊಸದಾಗಿ ಹುಟ್ಟುವುದಕ್ಕೆ ಮೊದಲು ಸೈತಾನನ ವಶದಲ್ಲಿದ್ದೀ. ನೀನು ಹೊಸದಾಗಿ ಹುಟ್ಟಿದಾಗ ಆ ಭಂದನ

ನಿನ್ನನ್ನು ಬಿಟ್ಟುಹೋಯಿತು. ಸೈತಾನನು ನಿನ್ನನು ಅಡ್ಡಿ ಮಾಡಲು ಈಗ ಸಾಧ್ಯವಿಲ್ಲ. ಯಾಕೆಂದರೆ ನಿನ್ನಲ್ಲಿರುವ ಪವಿತ್ರಾತ್ಮನು ನಿನ್ನನ್ನು ಕಾಪಾಡುತ್ತಾ ದೇವರ ಕತ್ತಿಯಲ್ಲಿ ನಿನ್ನನ್ನು ಬಲವಾಗಿ ನಡೆಯುವವನಾಗಿದ್ದಾನೆ. ಆದುದರಿಂದ ಪವಿತ್ರಾತ್ಮನು ದೇವರ ಚಿತ್ತದ ಪ್ರಕಾರವೇ ನೀನು ನಡೆಯುವಂತೆ ನಿನ್ನನ್ನು ಪ್ರೀತಿದಿಸುವನು.

## ನಾವು ಹೇಗೆ ಪವಿತ್ರಾತ್ಮನಿಂದ ತುಂಬಿಸಲ್ಪಡುತ್ತೇವೆ ?

ಯೋಹಾನ ಸುವಾರ್ತೆ ೩ : ೮ ರಲ್ಲಿ ಪವಿತ್ರಾತ್ಮನು ಗಾಳಿಯ ಹಾಗೆ ಉದಾಹರಿಸ್ಥಟ್ಟಿದ್ದಾನೆ. ಗಾಳಿಯನ್ನು ಹತೋಟಿಯಲ್ಲಿ ಇಡಲು ಯಾರಿಗೂ ಸಾಧ್ಯವಿಲ್ಲ. ಗಾಳಿಯು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೊ ಯಾರಿಗೊ ಗೊತ್ತಿಲ್ಲ. ಅದೇ ರೀತಿಯಲ್ಲಿ ಪವಿತ್ರಾತ್ಮನು ಮಾಡುವ ಕಾರ್ಯಗಳು ಯಾರಿಗೂ ತಿಳಿಯುವುದಿಲ್ಲ. ಆದರೆ ನಾವು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟಾಗ ಪವಿತ್ರಾತ್ಮನಲ್ಲಿ ತುಂಬಿಸ್ಪಟ್ಟವಾಗಿ ಜೀವಿಸುವವರಾಗಿದ್ದೇವೆ. ಇದನ್ನೇ ಆತ್ಮದಿಂದ ತುಂಬಿಸಲ್ಲಡುವುದು ಎನ್ನುತ್ತಾರೆ. ಯೇಸು ಹೇಳಿದ್ದೇನಂದರೆ, ''ಆ ಜಾತ್ರೆಯ ಮಹಾ ದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು- ಯಾವನಿಗಾದರೂ ನೀರಡಿಕೆಯಾಗಿದ್ದರೆ, ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು''.

ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು. ಆತನು ಇನ್ನೊ ತನ್ನ ಮಹಿಮೆಯ ಪದವಿಯನ್ನು ಹೊಂದದೇ ಇದ್ದೆ ಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿದ್ದಿಲ್ಲ. (ಯೋಹಾನು ೭ : ೩೭-೩೯)

ಹಾಗೆಯೇ ನಾನು ನಿಮಗೆ ಹೇಳುವದೇನೆಂದರೆ, ಬೇಡಿಕೊಳ್ಳಿರಿ. ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವುದು ತಟ್ಟಿರಿ, ನಿಮಗೆ ತೆರೆಯುವುದು ಯಾಕಂದರೆ, ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು. ಹುಡುಕುವವನಿಗೆ ಸಿಕ್ಕುವದು. ತಟ್ಟುವವನಿಗೆ ತೆರೆಯುವುದು. ನಿಮ್ಮಲ್ಲಿ ತಂದೆಯಾದವನು ಮೀನನ್ನು ಕೇಳುವ ಮಗನಿಗೆ ಮೀನು ಕೊಡದೆ ಹಾವನ್ನು ಕೊಡುವನೇ? ಅಥವಾ

ಮೊಟ್ಟೆಯನ್ನು ಕೇಳಿದರೆ, ಚೇಳನ್ನು ಕೊಡುವನೇ, ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡ ಬಲ್ಲವರಾದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ ಅಂದನು. (ಲೂಕ೧೧:೯-೧೩)

## ನೀನು ಒಂದೇಸಾರಿ ತುಂಬಿಸ್ಪಡುತ್ತೀಯಾ?

ಅಪೋಸ್ತಲನಾದ ಪೌಲು ಹೇಳುವ ಪ್ರಕಾರ ''ಆತ್ಮನಲ್ಲಿ ತುಂಬಿಸಲ್ಪಡು'' ಎನ್ನುವುದು ಯಾವಾಗಲೂ ನೀನು ಆತ್ಮನಲ್ಲಿ ತುಂಬಿಸಲ್ಪಡುತ್ತೀಯಾ ಎಂದು ಅರ್ಥ ದೇವರ ವಾಕ್ಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇದ್ದರೆ, ದೇವರ ವಾಕ್ಯದ ಪ್ರಕಾರ ರಕ್ಷಣೆ ಹೊಂದದೇ ಪವಿತ್ರಾತ್ಮನ ನಡೆಸುವಿಕೆ ಇಲ್ಲದಿದ್ದರೆ ನಿನಗೆ ಏನು ಅರ್ಥವಾಗುವುದಿಲ್ಲ. ನೀನು ಆತ್ಮನಿಂದ ನಡೆಸಲ್ಪಡದಿದ್ದರೆ ನೀನು ಆತ್ಮ ಬಂತು ಆತ್ಮ ಹೊಯಿತು ಎಂದೇ ಹೇಳುತ್ತೀಯ. ದೇವರು ತನ್ನ ಪವಿತ್ರಾತ್ಮನನ್ನು ಸದಾಕಾಲವು ನಮ್ಮಲ್ಲಿ ವಾಸ ಮಾಡಲಿಕ್ಕೇ ಕಳುಗಿಸಿದನು ಎಂದು ನಂಬುವುದು ಅಗತ್ಯವಾಗಿದೆ.

## ಅನ್ಯ ಬಾಷೆ ಅಂದರೆ ಏನು ?

ಅನ್ಯ ಭಾಷೆಯನ್ನು ಕುರಿತು ಸರಿಯಾಗಿ ಅರ್ಥ ಮಾಡಿಕೊಳ್ಳಲು ಅ.ಕೃ ೨ನೇ ಅಧ್ಯಾಯವನ್ನು ಓದಿರಿ. ಯೆರುಷಲೇಮಿನಲ್ಲಿ ಮೊಟ್ಟಮೊದಲಸಾರಿ ಶಿಷ್ಯರು ಯೇಸುವಿನ ಸುವಾರ್ತೆಯನ್ನು ಸಾರಬೇಕು. ಆದರೆ, ಅವರಿಗೆ ಅರೇಮಿಯಾ ಮತ್ತು ಗಲಿಲಿಯ ಭಾಷೆ ಬಿಟ್ಟು ಬೇರೆ ಯಾವ ಭಾಷೆ ಬರುವುದಿಲ್ಲ. ಆ ದಿನದಲ್ಲಿ ಯೆರುಸಲೇಮಿನಲ್ಲಿ ಸುಮಾರು ೧೭ ವಿವಿಧ ಭಾಷೆಗಳನ್ನು ಆಡುವ ಜನರು ವಾಸಿಸುತ್ತಿದ್ದರು. ಯೇಸುಕ್ರಿಸ್ತನು ಮಾಳಿಗೆಯಮೇಲೆ ಇದ್ದ ೧೨೦ ಮಂದಿಗೆ (ಶಿಷ್ಯರನ್ನು ಬಳಗೊಂಡು) ಐವತ್ತನೇಯದಿನ ಪವಿತ್ರಾತ್ಮನ ಶಕ್ತಿಯನ್ನು ಈ ಹದಿನೇಳು ಭಾಷೆಗಳನ್ನು ೧೨೦ ಮಂದಿಗೆ (ಜನರಿಗೆ) ಹಂಚಿದನು. ಕೂಡಲೆ ಅವರೆಲ್ಲರೂ ಈ ೧೭ ಭಾಷೆಗಳಲ್ಲಿ ದೇವರನ್ನು ಸ್ತುತಿಸಲು, ಆರಾದಿಸಲು ಪ್ರಾರಂಭಿಸಿದರು. ಇದೇ ಅನ್ಯ ಭಾಷಯಾಗಿದೆ. ಇವರ ಆರ್ಭಟದ

ಪ್ರಾರ್ಥನೆಯನ್ನು ಕೇಳಿ ಹೊರಗಿನವರು ಬಂದು ಇವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದಾಗ ಕೇಳಿ ಆಶ್ಚರ್ಯ ಪಟ್ಟರು. (ಅ.ಕೃ ೨ : ೧-೧೧) ಈ ವಾಕ್ಯಗಳನ್ನು ಬಹು ಜಾಗೃತೆಯಾಗಿ ಓದಿ ದ್ಯಾನಿಸಿದರೆ ನಿನಗೆ ಅರ್ಥವಾಗುತ್ತದೆ. ಇದನ್ನೇ ಅನ್ಯಭಾಷೆ ಎಂದು ದೇವರು ತಿಳಿಸುತ್ತಿದ್ದಾನೆ.

## ಪವಿತ್ರಾತ್ಮನು ನಮಗೋಸ್ಕರ ಮಾಡುವ ಕಾರ್ಯಗಳು:

೧. ಯೇಸುಕ್ರಿಸ್ತನ ದೇವರ ರಾಜ್ಯಕ್ಕಾಗಿ ತಿಳಿಯುವ ಶಕ್ತಿ (ಯೋಹಾನ ೩ : ೫-೮ ರೋಮಾ ೮ : ೯, ೧೬, ೧೭)

೨. ಯೇಸುಕ್ರಿಸ್ತನಿಗೆ ಇಷ್ಟವಾದ ರೀತಿಯಲ್ಲಿ ಜೀವಿಸುವ ಶಕ್ತಿ (ಎಫೆಸ ೩ : ೧೬ ರೋಮಾ ೮ : ೧೧, ೧೪)

೩. ದೇವರಿಗೆ ಸಾಕ್ಷಿಯಾಗಿ ಇರಲು ಶಕ್ತಿ

(ಅ.ಕೃ ೧ : ೮, ೧ ಕೊರಿಂಥ ೨ : ೪, ೫)

೪. ದೇವರ ಮಾರ್ಗ ಮತ್ತು ದೇವರನ್ನು ಅರ್ಥ ಮಾಡಿಕೊಳ್ಳುವ ಶಕ್ತಿ (ಎಫೆಸ ೧ : ೧೭-೨೧ ೧ ಕೊರಿಂಥ ೨ : ೯-೧೬ ಯೋಹಾನ ೧೬: ೧೩-೧೫)

೫. ದೇವರಲ್ಲಿ ಪ್ರಾರ್ಥಿಸಲು ಶಕ್ತಿ (ರೋಮಾ ೮ : ೨೬, ೨೭)

೬. ದೇವರೊಡನೆ ಮತ್ತು ಇತರ ಕ್ರೈಸ್ತರೊಡನೆ ಸಹವಾಸ ಮಾಡಲು ಶಕ್ತಿ

(ಫಿಲಿಪ್ಪಿ ೨ : ೧, ೨)

೭. ಹಳೇಯ ಸ್ವಭಾವ, ಪಾಪ, ಮರಣ ಸೈತಾನ ಮತ್ತು ಪ್ರಪಂಚವನ್ನು ಜಯಿಸಲು ಶಕ್ತಿ (೨ ಕೊರಿಂಥ ೩ : ೧೭ ೧ ಯೋಹಾನ ೪ : ೪ ರೋಮಾ ೮ : ೨ ಗಲಾತ್ಯ ೫ : ೧೬)

8. ನಿರೀಕ್ಷೆ ಮತ್ತು ಪ್ರೀತಿಯುಳ್ಳ ಶಕ್ತಿ (ರೋಮಾ ೫:೫ ರೋಮಾ ೧೫:೧೩)

## ಪ್ರಶ್ನೆಗಲು ಮತ್ತು ವಿಷೆಯಗಳು:

೧. ಪವಿತಾತ್ಮನು ಮಾಡುವ ಕಾರ್ಯಗಳೇನು?

(ಯೊಹಾನ ೧೪ : ೨೬, ೧೬ : ೧೩)

೩. ತಂದೆಯಾದ ದೇವರ ವಾಗ್ದಾನವನ್ನು ಹೊಂದವುದರಿಂದ ದೊರೆಯುವ ಲಾಭವೇನು ?

೪. ಪವಿತ್ರಾತ್ಮನು ಎಲ್ಲಿ ನಿವಾಸ ಮಾಡುತ್ತಾನೆ (೧ ಕೊರಿಂಥ ೩ : ೧೬) ನಾವು ಹೇಗೆ ಜೀವಿಸಬೇಕು ? (೧ ಕೊರಿಂಥ ೬ : ೧೯, ೨೦)

೫. ಪವಿತ್ರಾತ್ಮನ ವರಗಳು ಯಾವುವು ? (೧ ಕೊರಿಂಥ ೧೨:೮-೧೧)

೬. ಯಾರಿಗೆ ಈ ವರಗಳನ್ನು ದೇವರು ಕೊಡುತ್ತಾನೆ (೧ ಕೊರಿಂಥ ೧೨ : ೭)

೭. ತಂದೆಯು ಕೋರುವ ಆರಾದನೆ ಹೇಗಿರಬೇಕು ?

(ಯೋಹಾನ ೪ : ೨೩, ೨೪)

೮. ಪವಿತ್ರಾತ್ಮನ ಫಲಗಳು ಯಾವುವು ? (ಗಲಾತ್ಯ ೫ : ೨೨, ೨೩)

೯. ಗಲಾತ್ಯ ೫ : ೧೬-೧೮, ೨೫ ವಚನದ ಪ್ರಕಾರ

ಎ) ಪಾಪವು ಅದರ ಸ್ವಭಾವ ಮತ್ತು ಪವಿತ್ರಾತ್ಮನ ಸ್ವಭಾವವೇನು?

ಬಿ) ನಾವು ಯಾರಿಂದ ನಡೆಸಲ್ಪಡುತ್ತೇವೆ?

೧೦. ಪವಿತ್ರಾತ್ಮನ ಕಾರ್ಯಗಲು ನಡೆಯದಹಾಗೆ ಮಾಡುವ ಅಡ್ಡಿ ಏನು! (ಥೆಸಲೋನಿಕ ೫ : ೧೯, ಎಫೆಸ ೪ : ೩೦, ಅ.ಕೃ ೭ : ೫೧)

## ಪ್ರಾರ್ಥನೆ :

ತ್ರೈಯೇಕ ದೇವೆರಾದ ಯೇಸುಕ್ರಿಸ್ತನೆ ನೀನು ಕೊಟ್ಟಂತಹ ಪವಿತ್ರಾತ್ಮನನ್ನು ಗೌರವಿಸಿ, ಆತನು ಹೇಳಿದಂತೆ ನಾನು ಜೀವಿಸಲು, ಜೀವಿಸಿ, ನಿನ್ನನ್ನು ಮಹಿಮೆ ಪಡಿಸಲು ನನಗೆ ಸಹಾಯ ಮಾಡುತ್ತೀಯೆಂದು ನಂಬಿ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ. ಆಮೇನ್.